# All India Radio : Bangalore

# National Bulletin In Kannada

ರಾಷ್ಟ್ರೀಯ ವಾರ್ತೆಗಳು

ಆಕಾಶವಾಣಿ : ಬೆಂಗಳೂರು

## 22.06.2017/ 07.35 hrs

*****************

<u>ಮುಖ್ಯಾಂಶಗಳು</u>

ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿ ಆಯ್ಕೆ ಸಂಬಂಧ ನವದೆಹಲಿಯಲ್ಲಿಂದು ಪ್ರತಿ ಪಕ್ಷಗಳ ಸಭೆ.

1. ರಾಷ್ಟ್ರಪತಿ ಸ್ಥಾನಕ್ಕೆ ಎನ್‌ಡಿಎ ಸೂಚಿಸಿರುವ ಅಭ್ಯರ್ಥಿ ರಾಮನಾಥ್ ಕೋವಿಂದ್ ಅವರಿಗೆ ಎಐಎಡಿಎಂಕೆ – ಅಮ್ಮ ಗುಂಪಿನ ಬೆಂಬಲ ಪ್ರಕಟ.
2. ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಕಳೆದ ರಾತ್ರಿ ಸೇನೆ ಮತ್ತು ಉಗ್ರರ ನಡುವೆ ಗುಂಡಿನ ಕಾಳಗ – ಲಷ್ಕರ್ ಎ ತೋಯ್ಬಾ ಸಂಘಟನೆಗೆ ಸೇರಿದ ಮೂವರು ಸ್ಥಳೀಯರ ಹತ್ಯೆ.
3. ಭಾರತದಲ್ಲಿನ ಅಮೆರಿಕ ರಾಯಭಾರಿಯಾಗಲಿರುವ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಪ್ತ, ಅಗ್ರ ಸಹಾಯಕ ಕೆನೆತ್ –ಐ–ಜಸ್ಟರ್.
4. ಹಾಕಿ– ಲಂಡನ್‌ನಲ್ಲಿ ನಡೆಯುತ್ತಿರುವ ವಿಶ್ವ ಹಾಕಿ ಸೆಮಿಫೈನಲ್ ಲೀಗ್ ಪಂದ್ಯದ ಕ್ವಾರ್ಟರ್ ಫೈನಲ್ಸ್‌ನಲ್ಲಿಂದು ಸಂಜೆ ಭಾರತ – ಮಲೇಶಿಯ ಸೆಣಸು.

***********

ರಾಷ್ಟ್ರಪತಿ ಚುನಾವಣೆಗೆ ತಮ್ಮ ಅಭ್ಯರ್ಥಿ ಆಯ್ಕೆ ಸಂಬಂಧ ಪ್ರತಿಪಕ್ಷಗಳು ದೆಹಲಿಯಲ್ಲಿಂದು ಸಭೆ ನಡೆಸಲಿವೆ. ಈ ಸಂಬಂಧ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರು ಸಭೆ ಕರೆದಿದ್ದಾರೆ.

ಬಿಜೆಪಿ ರಾಮನಾಥ್ ಕೋವಿಂದ್ ಅವರನ್ನು ಎನ್‌ಡಿಎ ವತಿಯಿಂದ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯನ್ನಾಗಿ ಏಕಪಕ್ಷೀಯವಾಗಿ ಆಯ್ಕೆ ಮಾಡಿದೆ ಎಂದು ಕಾಂಗ್ರೆಸ್ ಟೀಕಿಸಿದೆ. ಪಕ್ಷದ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಕೋವಿಂದ್ ಅವರ ಆಯ್ಕೆ ಬಗ್ಗೆ ಕಾಂಗ್ರೆಸ್ ಪಕ್ಷದ ಜೊತೆ ಸಮಾಲೋಚನೆ ನಡೆಸಿಲ್ಲ ಎಂದು ಹೇಳಿದ್ದಾರೆ.

ಮಾಧ್ಯಮಗಳ ವರದಿ ಪ್ರಕಾರ, ಲೋಕಸಭೆಯ ಮಾಜಿ ಸ್ಪೀಕರ್ ಹಾಗೂ ಕಾಂಗ್ರೆಸ್ ನಾಯಕಿ ಮೀರಾ ಕುಮಾರ್ ಅವರನ್ನು ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವ ಸಾಧ್ಯತೆಗಳಿವೆ. ಮೀರಾ ಕುಮಾರ್ ನವದೆಹಲಿಯಲ್ಲಿ ನಿನ್ನೆ ಕಾಂಗ್ರೆಸ್ ಅಧ್ಯಕ್ಷೆಯನ್ನು ಭೇಟಿ ಮಾಡಿದ್ದರು. ಆದರೆ ಇಂದು ಸಂಜೆ ನಡೆಯಲಿರುವ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಂಡು ಆನಂತರ ಮಾಧ್ಯಮಗಳಿಗೆ ತಿಳಿಸುವ ಸಾಧ್ಯತೆ ಇದೆ.

ಈ ಮಧ್ಯೆ, ಜೆಡಿಯು ವಕ್ತಾರರಾದ ಕೆ.ಸಿ.ತ್ಯಾಗಿ, ತಮ್ಮ ಪಕ್ಷ ಈಗಾಗಲೇ ಎನ್‌ಡಿಎ ಸೂಚಿಸಿರುವ ಅಭ್ಯರ್ಥಿಯನ್ನು ಬೆಂಬಲಿಸಲು ನಿರ್ಧರಿಸಿರುವುದರಿಂದ ಕಾಂಗ್ರೆಸ್ ಅಧ್ಯಕ್ಷೆ ಕರೆದಿರುವ ಸಭೆಗೆ ಹಾಜರಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಆರ್‌ಜೆಡಿ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್, ಪ್ರತಿಪಕ್ಷಗಳು ಸೂಚಿಸುವ ಅಭ್ಯರ್ಥಿಯನ್ನು ತಮ್ಮ ಪಕ್ಷ ಬೆಂಬಲಿಸಲಿದೆ ಎಂದು ಹೇಳಿದ್ದಾರೆ.

***********

ಎನ್‌ಡಿಎ ಸೂಚಿಸಿರುವ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿ ರಾಮನಾಥ್ ಕೋವಿಂದ್ ಅವರಿಗೆ ಎಐಎಡಿಎಂಕೆ – ಅಮ್ಮ ಬಳಗ ಬೆಂಬಲ ವ್ಯಕ್ತಪಡಿಸಿದೆ. ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಈ ಪ್ರಕಟಣೆ ಹೊರಡಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪಳನಿ ಸ್ವಾಮಿಯವರ ಜೊತೆ ದೂರವಾಣಿ ಮೂಲಕ ಸಮಾಲೋಚಿಸಿ ಎನ್‌ಡಿಎ ಸೂಚಿಸಿರುವ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಚೆನ್ನೈನಲ್ಲಿ ನಿನ್ನೆ ಎಐಎಡಿಎಂಕೆ ಹೊರಡಿಸಿರುವ ಪತ್ರಿಕಾ ಹೇಳಿಕೆಯಲ್ಲಿ ಪಕ್ಷದ ಹೈಕಮಾಂಡ್ ಜೊತೆ ಚರ್ಚಿಸಿ ಕೋವಿಂದ್ ಅವರನ್ನು ಬೆಂಬಲಿಸುವ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಇದಕ್ಕೂ ಮುನ್ನ ಜೆಡಿಯು ಎನ್‌ಡಿಎ ಸೂಚಿಸಿರುವ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಗೆ ಬೆಂಬಲ ಘೋಷಿಸಿದೆ.

ಬಿಜೆಪಿ ಹಿರಿಯ ನಾಯಕರು ಇತರೆ ಪಕ್ಷಗಳಿಗೆ ದೇಶ ಅತ್ಯಂತ ಉನ್ನತ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿ ಸ್ಥಾನಕ್ಕೆ ಕೋವಿಂದ್ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದ್ದಾರೆ.

*****************

ಕ್ಷಯರೋಗದಿಂದ ಬಳಲುತ್ತಿರುವವರು ಕೇಂದ್ರ ಸರ್ಕಾರದ ಆರೋಗ್ಯ ಸೇವೆಯ ಪ್ರಯೋಜನಗಳನ್ನು ಪಡೆಯಲು ಆಧಾರ್ ಸಂಖ್ಯೆ ನೀಡುವುದು ಕಡ್ಡಾಯವಾಗಿದೆ. ಈ ಸಂಬಂಧ ಕೇಂದ್ರ ಆರೋಗ್ಯ ಸಚಿವಾಲಯ ಅಧಿಸೂಚನೆ ಹೊರಡಿಸಿದ್ದು ಯಾರು ಆಧಾರ್ ಸಂಖ್ಯೆ ಹೊಂದಿಲ್ಲವೋ ಅವರು ಆಗಸ್ಟ್ 31 ರೊಳಗೆ ಆಧಾರ್‌ಗೆ ನೋಂದಣಿ ಮಾಡಿಕೊಳ್ಳುವಂತ ಸೂಚಿಸಿದೆ.

ಸಚಿವಾಲಯವೇ ರೋಗಿಗಳಿಗೆ ಆಧಾರ್ ನೋಂದಣಿ ಸೇವೆಯನ್ನು ಒದಗಿಸಲಿದೆ. ನಿಗದಿತ ಬ್ಲಾಕ್ ಅಥವಾ ತಾಲ್ಲೂಕಿನಲ್ಲಿ ಆಧಾರ್ ನೋಂದಣಿ ಕೇಂದ್ರ ಇಲ್ಲದಿದ್ದರೆ ರಾಜ್ಯ ಸರ್ಕಾರಗಳು ಯುಐಡಿಎಐ ಸಹಯೋಗದೊಂದಿಗೆ ಸೂಕ್ತ ಸ್ಥಳಗಳಲ್ಲಿ ಆಧಾರ್ ನೋಂದಣಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಂದ್ರ ಸೂಚನೆ ನೀಡಿದೆ.

***********

ಮಧ್ಯಪ್ರದೇಶದ ಮಂಡ್ಸೂರ್ ಜಿಲ್ಲೆಯಲ್ಲಿ ಈ ತಿಂಗಳ 6 ರಂದು ನಡೆದ ರೈತರ ಪ್ರತಿಭಟನೆಯನ್ನು ನಿಯಂತ್ರಿಸುವಲ್ಲಿ ವಿಫಲರಾದ ಮೂವರು ಅಧಿಕಾರಿಗಳನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ. ಘಟನೆ ಸಂದರ್ಭದಲ್ಲಿ ಕಲೆಕ್ಟರ್ ಆಗಿದ್ದ ಸ್ವತಂತ್ರಕುಮಾರ್ ಸಿಂಗ್, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಒ.ಪಿ. ತ್ರಿಪಾಠಿ ಮತ್ತು ನಗರ ಎಸ್.ಪಿ. ಕೃಷ್ಣ ಸಾಯಿ ತೋಟೆ ಅವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

ಇದಕ್ಕೂ ಈ ಅಧಿಕಾರಿಗಳನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿತ್ತು. ಮೇಲ್ನೋಟಕ್ಕೆ ಈ ಅಧಿಕಾರಿಗಳು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಈ ಕ್ರಮ ಜರುಗಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಹಿಂಸಾಚಾರ ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ.

***********

ಮುಂಬೈ ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ ಐದು ನಿಲ್ದಾಣಗಳ ಮರು ಅಭಿವೃದ್ಧಿ ಕಾರ್ಯವನ್ನು ಚುರುಕುಗೊಳಿಸುವಂತೆ ರೈಲ್ವೆ ಸಚಿವ ಸುರೇಶ್ ಪ್ರಭು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮುಂಬೈನಲ್ಲಿ ನಿನ್ನೆ ಅಧಿಕಾರಿಗಳ ಜೊತೆ ಅಭಿವೃದ್ಧಿ ಯೋಜನೆಗಳ ಪ್ರಗತಿ ಕುರಿತು ಪರಾಮರ್ಶೆ ನಡೆಸಿದರು. ಪ್ರಯಾಣಿಕರಿಗೆ ರೈಲು ನಿಲ್ದಾಣಗಳಲ್ಲ ಹೆಚ್ಚಿನ ಮೂಲ ಸೌಕರ್ಯ ಒದಗಿಸಿಕೊಡುವ ನಿಲ್ದಾಣ ಮರು ಅಭಿವೃದ್ಧಿ ಕಾರ್ಯಕ್ರಮ ತ್ವರಿತವಾಗಿ ಅನುಷ್ಠಾನಗೊಳಿಸಬೇಕು. ನಿಲ್ದಾಣದ ಸುತ್ತ ಮುತ್ತ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡಲಾಗುವುದು

ಈ ಯೋಜನೆ ಅಡಿ ಮುಂಬೈ ಲೋಕಮಾನ್ಯ ತಿಲಕ್ ನಿಲ್ದಾಣ, ಥಾಣೆ, ಮುಂಬೈ ಸೆಂಟ್ರಲ್, ಬಾಂದ್ರಾ ಮತ್ತು ಭೋರಿವಾಲಿ ನಿಲ್ದಾಣಗಳ ಅಭಿವೃದ್ಧಿ ಸೇರಿದಂತೆ 400 ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಗುರಿಹೊಂದಲಾಗಿದೆ.

***********

ಎನ್.ಕೆ. ಸಿನ್ಹಾ ವಾರ್ತಾ ಮತ್ತು ಪ್ರಸಾರ ಇಲಾಖೆಯ ನೂತನ ಕಾರ್ಯದರ್ಶಿಯಾಗಲಿದ್ದಾರೆ. ಅಜಯ್ ಮಿತ್ತಲ್ ಅವರ ಸ್ಥಾನವನ್ನ ಸಿನ್ಹಾ ಅಲಂಕರಿಸುವರು. ಅಜಯ್ ಮಿತ್ತಲ್ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಹೊಸ ಕಾರ್ಯಾದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಸೆಪ್ಟಂಬರ್ 1 ರಿಂದ ಜಾರಿಗೆ ಬರುವಂತೆ ರಾಜೀವ್ ಗೌಬ ಅವರನ್ನು ಗೃಹ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಆಗಸ್ಟ್ 31 ಕ್ಕೆ ಹಾಲಿ ಕಾರ್ಯದರ್ಶಿ ರಾಜೀವ್ ಮೆಹರ್ಷಿ ಅವರ ಅಧಿಕಾರ ಅವಧಿ ಮುಕ್ತಾಯಗೊಳ್ಳಲಿರುವ ಹಿನ್ನೆಯಲ್ಲಿ ಗೌಬ ಅವರನ್ನು ಹೊಸ ಗೃಹ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಸುಭಾಷ್ ಸಿ ಗರ್ಗ್ ಅವರನ್ನ ಆರ್ಥಿಕ ವ್ಯವಹಾರಗಳ ಇಲಾಖೆ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

***********

ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಕಳೆದ ರಾತ್ರಿ ಸೇನಾ ಪಡೆಗಳು ಹಾಗೂ ಉಗ್ರರ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಲಷ್ಕರ್ ಎ ತೋಯ್ಬಾ ಸಂಘಟನೆಗೆ ಸೇರಿದ ಮೂವರು ಸ್ಥಳೀಯರನ್ನು ಹತ್ಯೆ ಗೈಯ್ಯಲಾಗಿದೆ.

ಗುಪ್ತಚರ ಮಾಹಿತಿ ಆಧಾರಿಸಿ ಕಾಕಾಪೊರ ಪ್ರದೇಶದಲ್ಲಿ ಉಗ್ರರು ಅಡಗಿ ಕುಳಿತಿದ್ದ ಮನೆಯನ್ನು ಸುತ್ತುವರಿದು ಕಾರ್ಯಾರಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಕಾಶ್ಮೀರದ ಬರಾಮುಲ್ಲ ಜಿಲ್ಲೆಯಲ್ಲಿ ಮಂಗಳವಾರ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರನ್ನು ಹತ್ಯೆಗೈಯ್ಯಲಾಗಿತ್ತು.

***********

ಬಾಹ್ಯಾಕಾಶ, ಮಾಹಿತಿ ತಂತ್ರಜ್ಞಾನ, ಸಮುದ್ರದಾಳದಲ್ಲಿ ಇಂಜಿನಿಯರಿಂಗ್, ಕರಾವಳಿ ತಂತ್ರಜ್ಞಾನ ಸೇರಿದಂತೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಹಕಾರ ಸಂಬಂಧ ವೃದ್ಧಿಸುವ ಹಲವು ವಲಯಗಳನ್ನು ಭಾರತ ಮತ್ತು ರಷ್ಯಾ ಗುರುತಿಸಿವೆ.

ಸೈಬೀರಿಯನ್ ಪಟ್ಟಣದಲ್ಲಿ ನಿನ್ನೆ ನಡೆದ ಭಾರತ–ರಷ್ಯಾ ಜಂಟಿ ಸಮಿತಿಯ ಮೊದಲ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಹಕಾರ ವಲಯಗಳನ್ನು ಗುರುತಿಸಲಾಯಿತು.

ಈ ಸಭೆಯಲ್ಲಿ ರಕ್ಷಣಾ ಸಚಿವ ಅರುಣ್ ಜೇಟ್ಲಿ ಹಾಗೂ ರಷ್ಯಾದ ಉಪ ಪ್ರಧಾನಿ ದಿಮಿತ್ರಿ ರೋಜಿಜಿನ್ ಭಾಗವಹಿಸಿದ್ದರು. ಉಭಯ ದೇಶಗಳು ಜಂಟಿಯಾಗಿ ಕೈಗೊಂಡಿರುವ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಅನುಸಬೇಕಾದ ಕಾರ್ಯ ತಂತ್ರಗಳನ್ನು ಅಂತಿಮಗೊಳಿಸಿದವರು.

ಅರುಣ್ ಜೇಟ್ಲಿ ಮಾಸ್ಕೊಗೆ ತೆರಳಲಿದ್ದು ಅಲ್ಲಿ ನಾಳೆ ನಡೆಯಲಿರುವ ಮಿಲಿಟರಿ ತಂತ್ರಜ್ಞಾನ ಸಹಕಾರ ಕುರಿತ ಭಾರತ–ರಷ್ಯಾ ಅಂತರ ಸರ್ಕಾರದ ಆಯೋಗದ ಸಭೆಯಲ್ಲಿ ಭಾಗವಹಿಸಲಿದ್ದಾರೆ.

***********

ಭಾರತದಲ್ಲಿನ ಅಮೆರಿಕಾದ ರಾಯಭಾರಿಯಾಗಿ ಅಮೆರಿಕಾ ಅಧ್ಯಕ್ಷ ಡೊನಲ್ಡ್ ಟ್ರಂಪ್ ಅವರ ಆಪ್ತ ಹಾಗೂ ಅಗ್ರ ಸಹಾಯಕರಾಗಿರುವ ಕೆನೆತ್–ಐ–ಜಸ್ಟರ್ ನೇಮಕವಾಗುವ ಸಾಧ್ಯತೆ ಇದೆ. ಸೆನೆಟ್‌ನಿಂದ ನಾಮನಿರ್ದೇಶನಗೊಂಡು ದೃಢೀಕರಿಸಲ್ಪಟ್ಟರೆ ರಿಚರ್ಡ್ ವರ್ಮಾ ಅವರ ಸ್ಥಾನವನ್ನು ಕೆನೆತ್ ಅವರು ಅಲಂಕರಿಸಲಿದ್ದಾರೆ. ಅಧ್ಯಕ್ಷರೂ ಸೇರಿದಂತೆ ಶ್ವೇತಭವನದ ಎಲ್ಲರೊಂದಿಗೂ ಕೆನ್ ಅವರು ಉತ್ತಮ ಹಾಗೂ ಧನಾತ್ಮಕ ಸಂಬಂಧ ಹೊಂದಿದ್ದಾರೆ ಎಂದು ಶ್ವೇತಭವನದ ಉಪ ವಕ್ತಾರ ಲಿಂಡ್ಸೆ–ಇ–ವಾಲ್ಟರ್ಸ್ ಹೇಳಿದ್ದಾರೆ.

ಆದರೆ ಇದುವರೆಗೂ ಈ ಬಗ್ಗೆ ಅಧಿಕೃತ ಹೇಳಿಕೆ ವರದಿಯಾಗಿಲ್ಲ. ಅಮೆರಿಕಾದ ಅಧ್ಯಕ್ಷರಾಗಿ ಟ್ರಂಪ್, ಬರಾಕ್ ಒಬಾಮ ಸ್ಥಾನ ಅಲಂಕರಿಸಿದ ನಂತರ ಮೊದಲ ಬಾರಿಗೆ ಅಮೆರಿಕಾ ಸಂಜಾತ ಭಾರತೀಯ ವರ್ಮಾ ಅವರು ರಾಯಭಾರಿ ಸ್ಥಾನ ಅಲಂಕರಿಸಿದ್ದರು.

***********

ಇರಾಕ್‌ನ ಐತಿಹಾಸಿಕ ಮಸೂಲ್ ಮಸೀದಿಯನ್ನು ಸ್ಫೋಟಿಸಲಾಗಿದೆ. ಅತ್ಯಂತ ಪುರಾತನ ಎನ್ನಬಹುದಾದ ಮಸೀದಿಯನ್ನು 2014 ರಲ್ಲಿ ಇಸ್ಲಾಮಿಕ್ ನಾಯಕ ಅಬೂ ಬಕರ್ ಅಲ್ ಬಾಗ್ದಾದಿ ಇಸ್ಲಾಮಿಕ್ ಕಿಲಾಫತ್‌ನ್ನು ಘೋಷಿಸಿದ್ದರು.

800 ವರ್ಷಗಳು ಹಳೆಯದಾದ ಮಸೂಲ್ ಗ್ರೇಟ್ ಮಾಸ್ಕ್ ಎಂದು ಕರೆಯಲ್ಪಡುವ ಮಸೀದಿ ಸುತ್ತ ಮಿಲಿಟರಿ ಪಡೆ ಸುತ್ತುವರಿದಿತ್ತು. ಆಗ ಇಸ್ಲಾಮಿಕ್ ಉಗ್ರರು ಕೃತ್ಯ ಎಸಗಿದ್ದಾರೆ.

***********

ಹಾಲಿ 7.6 ಬಿಲಿಯನ್ ಇರುವ ವಿಶ್ವದ ಜನಸಂಖ್ಯೆ 2050 ವೇಳೆಗೆ 9.8 ಬಿಲಿಯನ್‌ಗೆ ಏರಿಕೆಯಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ. ಭಾರತ ಇನ್ನು ಏಳು ವರ್ಷಗಳಲ್ಲಿ ಚೀನಾ ದೇಶವನ್ನು ಜನಸಂಖ್ಯೆಯಲ್ಲಿ ಮೀರಿಸಲಿದೆ ಎಂದು ವಿಶ್ವ ಸಂಸ್ಥೆಯ ವರದಿಯಲ್ಲಿ ತಿಳಿಸಲಾಗಿದೆ.

ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ವಿಭಾಗ ಪ್ರಕಟಿಸಿರುವ ಅಂಕಿ ಅಂಶಗಳ ಪ್ರಕಾರ ನೈಜೀರಿಯ 2050 ರವೇಳೆಗೆ ಅಮೆರಿಕವನ್ನು ಹಿಂದಿಕ್ಕಿ ವಿಶ್ವದ ಹೆಚ್ಚಿನ ಜನಸಂಖ್ಯೆ ಇರುವ ಮೂರನೇ ರಾಷ್ಟ್ರವಾಗಲಿದೆ. ಭಾರತದಲ್ಲಿ ಹಾಲಿ 130 ಕೋಟಿ ಜನರಿದ್ದು 2024 ರ ವೇಳೆಗೆ ಅದು ಚೀನಾದಲ್ಲಿರುವ 140 ಕೋಟಿ ಜನಸಂಖ್ಯೆಯನ್ನು ಮೀರಿಸಲಿದೆ ಎಂದು ಹೇಳಲಾಗಿದೆ.

***********

ಲಂಡನ್‌ನಲ್ಲಿ ಇಂದು ಸಂಜೆ ನಡೆಯಲಿರುವ ವಿಶ್ವ ಹಾಕಿ ಸೆಮಿಫೈನಲ್ ಲೀಗ್ ಪಂದ್ಯಾವಳಿಯ ಕ್ವಾಟರ್ ಫೈನಲ್ಸ್‌ನಲ್ಲಿಂದು ಭಾರತ ಮತ್ತು ಮಲೇಷಿಯಾ ಮುಖಾಮುಖಿಯಾಗಲಿವೆ. ಭಾರತೀಯ ಕಾಲಮಾನ ರಾತ್ರಿ 8 ಗಂಟೆಗೆ ಪಂದ್ಯ ಆರಂಭವಾಗಲಿದೆ. ಬಿ ಗುಂಪಿನಲ್ಲಿ ನೆದರ್‌ಲ್ಯಾಂಡ್ ನಂತರದ ಎರಡನೇ ಸ್ಥಾನದಲ್ಲಿರುವ ಭಾರತ, ಕೆನಡಾ ಹಾಗೂ ಪಾಕಿಸ್ತಾನವನ್ನು ಹಿಂದಿಕ್ಕಿದೆ. ಎ ಗುಂಪಿನಲ್ಲಿ ಅಗ್ರ ಸ್ಥಾನದಲ್ಲಿರುವ ಅರ್ಜೆಂಟೀನಾ ಹಾಗೂ ಇಂಗ್ಲೆಂಡ್ ನಂತರದ ಮೂರನೇ ಸ್ಥಾನದಲ್ಲಿರುವ ಮಲೇಷಿಯಾ, ಚೀನಾವನ್ನು ಹಿಂದಿಕ್ಕಿದೆ.

ಇನ್ನುಳಿದ ಕ್ವಾರ್ಟರ್‌ಫೈನಲ್ಸ್ ಪಂದ್ಯಗಳಲ್ಲಿ ಅರ್ಜೆಂಟೀನಾ, ಪಾಕಿಸ್ತಾನವನ್ನು ಎದುರಿಸಲಿದ್ದರೆ, ನೆದರಲ್ಯಾಂಡ್ಸ್–ಚೀನಾ ವಿರುದ್ಧ ಇಂಗ್ಲೆಂಡ್– ಕೆನಡಾ ವಿರುದ್ಧ ಸೆಣಸಲಿವೆ.

***********

ಸಿಡ್ನಿಯಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಎಂಟು ಆಟಗಾರರಲ್ಲಿ ಪಿ.ವಿ ಸಿಂಧು, ಸೈನಾ ನೆಹ್ವಾಲ್, ಬಿ.ಸಾಯಿ ಪ್ರಣೀತ್, ಕಿಡಂಬಿ ಶ್ರೀಕಾಂತ್ ಕ್ವಾರ್ಟರ್‌ಫೈನಲ್ ಪ್ರವೇಶ ಪಡೆಯಲು ಇಂದು ಸೆಣಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನ ಪ್ರಿ–ಕ್ವಾರ್ಟರ್ ಫೈನಲ್‌ನಲ್ಲಿ ಐದನೇ ಶ್ರೇಯಾಂಕಿತ ಪಿ.ವಿ ಸಿಂಧು ಮಲೇಷಿಯಾದ ಸೋನಿಯಾ ಚೀಹ್ ವಿರುದ್ಧ ಆಡಲಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಣೀತ್ ಚೀನಾದ ಯುಕ್ಸಿಯಾಂಗ್ ಹುಯಾಂಗ್ ಅವರನ್ನು ಎದುರಿಸಲಿದ್ದರೆ, ಶ್ರೀಕಾಂತ್ ದಕ್ಷಿಣ ಕೊರಿಯಾದ ಅಗ್ರ ಶ್ರೇಯಾಂಕಿತ ಆಟಗಾರ ವೊನ್‌ಹೊ ಸಾನ್ ಅವರೊಂದಿಗೆ ಸೆಣಸಲಿದ್ದಾರೆ.

ಇನ್ನು ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಅಶ್ವಿನಿ ಪೊನ್ನಪ್ಪ ಹಾಗೂ ಎನ್. ಸಿಕ್ಕಿ ರೆಡ್ಡಿ ಮತ್ತು ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಇಂದು ತಮ್ಮ ಪ್ರಿ – ಕ್ವಾರ್ಟರ್ ಫೈನಲ್ ಪಂದ್ಯಗಳನ್ನು ಆಡಲಿದ್ದಾರೆ.

***************